ಮೈಸೂರ ಗೆಜಿಟ್.

ಪು. 44.] ಸರ್ಕಾರದಿಂದ ಪ್ರಾಯುಷ್ ಆದ್ದು. [ನಂ. 19.

ಬೆಂಗಳೂರು, ಗುರುವಾರ, ಮೇ ತಾ|| 13, ಸ್ ೧೯೦೯.

II ನೆ ಭಾಗ.

ಇಂಡ್ಯಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್ ರು ಮಗೈರೇರಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಮೈಸೂರು ಚೀಫ್ ಕೋರ್ಟ್‌ನಲ್ಲಿ.

ಕ್ರಿಮಿನಲ್ ತರ್ಫು.

ಸ್ ೧೯೦೪ನೆ ಇಸವಿ ಫೆಬ್ರವರಿ 1ನೆ ತಾರೀಖು 72ನೆ ನಂಬರು ರೂಲ್ ಆಫ್ ಪ್ರಾಕ್ಟೀಸಿಗೆ ಅನುಬಂಧನೆ.

ತಾರೀಖು 22ನೆ ಏಪ್ರೆಲ್ 1909.

ಮೇಲ್ಕಂಡ ರೂಲ್ ಆಫ್ ಪ್ರಾಕ್ಟೀಸಿಗೆ ಲಗತ್ತಿರುವ ನಮೂನೆಗಳ ಪಟ್ಟಿಗೆ ಈ ಕೆಳಗಿನ ನಮೂನೆಯನ್ನು ಸೇರಿಸಬೇಕೆಂದು ಚೀಫ್ ಕೋರ್ಟ್‌ನವರು ಆಜ್ಞಾಪಿಸಿರುತ್ತಾರೆ.

ನಮೂನೆ ನಂಬರು.	ಕ್ರಿಮಿನಲ್ ಪ್ರೊಸೀಜರ್ ಕೋಡ್ ಸೆಕ್ಷನ್.	ನಮೂನೆ ಹೆಸರು.	ಇಂಗ್ಲೀಷಿನಲ್ಲಿಯೋ ಅಥವಾ ಕನ್ನಡದಲ್ಲಿಯೋ.
87	344ನೆ ಸೆಕ್ಷನ್ ...	ವಿಚಾರಣೆ ಮಧ್ಯಕಾಲದಲ್ಲಿ ಅಪರಾಧಿಯನ್ನು ಜೈಲಿನಲ್ಲಿ ಇಡಲು ಕಳುಹಿಸಿಕೊಡಲ್ಪಡುವ ವಾರಂಟು.	ಎರಡರಲ್ಲಿಯೂ.

ವಿ. ಎ. ರಾಜರತ್ನ ಮೊದಲಿಯಾರ್,
ರಿಜಿಸ್ಟ್ರಾರ್.

ಫೈನಾನ್ಷಿಯಲ್ ಇಲಾಖೆ.

ತಾರೀಖು 26ನೆ ಫೆಬ್ರವರಿ 1909.

1909ನೆ ಇಸವಿ ಏಪ್ರೆಲ್ 1ನೆ ತಾರೀಖು ಲಾಗಾಯಿತು 1909ನೆ ಇಸವಿ ಜೂನ್ 30ರ ವರಿಗೆ ಕೆಳಗೆ ನಮೂದಿಸಿರುವ ಖರ್ಚುಗಳ ಮೇಲೆ ಹುಂಡಿಗಳಿಗೆ (Supply Bills) ಅಪ್ಲಿಕೇಷ್ಟಗಳನ್ನು ಮೈಸೂರು ಸೀಮೆಯ ಶ್ರೀಮತ್ ಮಹಾರಾಜರವರ ಸರ್ಕಾರದ ಕಂಟ್ರೋಲರು ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಅಪ್ಲಿಕೇಷನ್ನಲ್ಲಿಯೂ ಈ ಕೆಳಗೆ ತೋರಿಸಿರುವ ವಿವರಗಳು ಇರಬೇಕು.

1. ಹುಂಡಿ ಮೊಬಲಗು.
2. ಹಣ ಪಾವತಿಯಾಗಬೇಕಾದ ಖಜಾನೆಯ ಹೆಸರು.
3. ಹುಂಡಿಗೆ ಅಪ್ಲಿಕೇಷ್ಟ ಹಾಕುವವರ ಹೆಸರು ಮತ್ತು ವಿಳಾಸ.